ಸದನದಲ್ಲಿರುವವರಿಗೆ ಅರ್ಥ ಶಾಸ್ತ್ರದ ಬಗ್ಗೆ, ರಾಜ್ಯಶಾಸ್ತ್ರದ ಬಗ್ಗೆ ಕನಿಷ್ಠ ಜ್ಞಾನ ಇಲ್ಲವೆಂದು ತಿಳಿದುಕೊಂಡು ಮಾಡಬೇಡಿ. ನೀವು ಅಂದರೆ ಈ ಸರ್ಕಾರ ಕನಿಷ್ಟ ಜ್ಞಾನ ಪಡೆಯುವಂಥ ಕೆಲಸ ಮಾಡಿ. It should try to get atleast elementary knowledge of politics and economics before it places such a document before this House.

6. ಸಂವಿಧಾನ ತಿದ್ದುಪಡಿ ಸ್ಥಿರೀಕರಣ – ನಿರ್ಣಯ

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಪ್ರಸ್ತಾವ ಏನೆಂದರೆ,

"ಸಂಸತ್ತಿನ ಉಭಯ ಸದನಗಳಿಂದ ಅಂಗೀಕರಿಸಲ್ಪಟ್ಟ ಭಾರತ ಸಂವಿಧಾನದ 368ನೇ ಅನುಚ್ಛೇದ ಖಂಡಿಕೆ (ಬಿ) ಕಲಮು(2)ರಲ್ಲಿ ಬರುವ 1992ರ ತಿದ್ದುಪಡಿ (ಎಪ್ಪತ್ತೇಳನೆಯ ತಿದ್ದುಪಡಿ) ವಿಧೇಯಕವನ್ನು ಸಂವಿಧಾನದ ಉದ್ದೇಶಕ್ಕೆಂದು ಈ ಸದನವು ಸ್ಥಿರೀಕರಿಸುತ್ತದೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಸಂಸತ್ತಿನ ಉಭಯ ಸದನಗಳಿಂದ ಅಂಗೀಕರಿಸಲ್ಪಟ್ಟ ಭಾರತ ಸಂವಿಧಾನದ 368ನೇ ಅನುಚ್ಛೇದ ಖಂಡಿಕೆ (ಬಿ) ಕಲಮು(2)ರಲ್ಲಿ ಬರುವ 1992ರ ತಿದ್ದುಪಡಿ (ಎಪ್ಪತ್ತೇಳನೆಯ ತಿದ್ದುಪಡಿ) ವಿಧೇಯಕವನ್ನು ಸಂವಿಧಾನದ ಉದ್ದೇಶಕ್ಕೆಂದು ಈ ಸದನವು ಸ್ಥಿರೀಕರಿಸುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

5. ಶಾಸನ ರಚನಾ ಕಾರ್ಯಕಲಾಪಗಳು

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(1) ಕರ್ನಾಟಕ ನಗರ ಪ್ರದೇಶದಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕ, 1993

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1993ರ ಕರ್ನಾಟಕ ನಗರ ಪ್ರದೇಶದಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

+ಶ್ರೀ ಚೌಡರೆಡ್ಡಿ : ಮಾನ್ಯ ಅಧ್ಯಕ್ಷರೇ, ಅಕ್ರಮ ಕಟ್ಟಡಗಳನ್ನು ಸಕ್ರಮಗೊಳಿಸುವ ಈ ಕಾಯ್ದೆ 5.2.92ರಲ್ಲಿ ನೋಟಿಫಿಕೇಷನ್ ಆಗಿ ಈ ಕಾಯ್ದೆ 1.8.92ರಲ್ಲಿ ಜಾರಿಗೆ ಬಂದಿದೆ. ಜಾರಿಗೆ ಬಂದಮೇಲೆ ಆ ದಿನಾಂಕದಿಂದ 60 ದಿನಗಳ ಒಳಗೆ ಅಪ್ಲಿಕೇಷನ್ಸ್ ಹಾಕಬೇಕಾಗಿತ್ತು. ಯಾರೇ ಅಕ್ರಮವಾಗಿ 31.3.90ಕ್ಕೆ ಹಿಂದೆ ಮನೆ ಕಟ್ಟಿರತಕ್ಕವರು ಇದು ಜಾರಿಗೆ ಬಂದ 1.8.92ರಿಂದ 60 ದಿವಸಗಳಲ್ಲಿ ಅರ್ಜಿ ಹಾಕಬೇಕಾಗಿತ್ತು. ಆದು ಕಾರಣಾಂತರದಿಂದ ನಮ್ಮಂತೆ ಹೊಸಬರಿಂದ 2 ವರ್ಷ ನಮ್ಮಂತೆ ಹಾಕಬೇಕೆಂದು

ಕೇಳಿಕೊಳ್ಳುತ್ತೇನೆ. ಆದ್ದರಿಂದ 1.8.94ರವರೆಗೆ ದಿನಾಂಕ ಕೊಡುತ್ತಿದ್ದೇವೆ. ಇನ್ನು ಇದರಲ್ಲಿ, ಸರ್ಕಾರದ ಜಮೀನು ಹಾಗೂ ರೆವಿನ್ಯೂ ಜಮೀನು ಎಂದು ಇದೆ. ಮೊದಲನೇ ಆಕ್ಷೆಯಲ್ಲಿ ಅಕ್ರಮವಾಗಿ ಕಟ್ಟಿರತಕ್ಕ ಮನೆಗಳು ಸರ್ಕಾರಿ ಜಮೀನು ಹಾಗೂ ರೆವಿನ್ಯೂ ಸೈಟ್ನಲ್ಲಿ ಏನಿವೆ ಅವರನ್ನು ಕೂಡ ರೆಗ್ಯುಲರೈಸ್ ಮಾಡಬೇಕೆಂದು ಇದೆ. ಸರ್ಕಾರಿ ಜಮೀನು ಎಂದರೆ ಈ ಆಫೀಸಸ್ ಇರುತ್ತದಲ್ಲಾ, ಅದರ ಎದುರುಗಡೆ excluding unauthorised construction in land appurtenant to government buildings. ಸರ್ಕಾರಿ ಕಟ್ಟಡಗಳು ಇರತಕ್ಕ ಕಡೆ ಸರ್ಕಾರಿ ಜಾಗ ಇದ್ದರೂ ಕೂಡ ಅಲ್ಲಿ ಅಕ್ರಮವಾಗಿ ಕಟ್ಟಿದ್ದರೆ ಸಕ್ರಮ ಮಾಡಬಾರದು ಮತ್ತು ಕಮರ್ಶಿಯಲ್ ಬಿಲ್ಡಿಂಗ್ಸ್ ಎಂದು ಹೇಳಿ ಅದನ್ನು ತೆಗೆದುಹಾಕಬೇಕು. ಎಲ್ಲಿ ಕಮರ್ಶಿಯಲ್ ಬಿಲ್ಡಿಂಗ್ ಕಟ್ಟಿರುತ್ತಾರೋ ಅದನ್ನು ರೆಗ್ಯುಲರೈಸ್ ಮಾಡಬಾರದು ಎಂದು ತಿದ್ದುಪಡಿ ತಂದಿದ್ದೇವೆ. ಸೆಕ್ಷನ್ 6 ರಲ್ಲಿ ಸ್ಕ್ರೀನಿಂಗ್ ಕಮಿಟಿ ಮಾಡಿದ್ದೇವೆ. ಅದರಲ್ಲಿ ಇಬ್ಬರು ಶಾಸಕರು, ಒಬ್ಬರು ಮಹಿಳಾ ಸದಸ್ಯರು ಒಬ್ಬರು ಪರಿಶಿಷ್ಟ ಜಾತಿ ಹಾಗೂ ಪಂಗಡಕ್ಕೆ ಸೇರಿದವರು ಹೀಗೆ ನಾಲ್ಕು ಜನರನ್ನು ಮೊದಲು ಇರುವವರ ಜೊತೆ ಸ್ಕ್ರೀನಿಂಗ್ ಕಮಿಟಿಯಲ್ಲಿ ಹಾಕಬೇಕೆಂದು ತಿದ್ದುಪಡಿ ತರುತ್ತಿದ್ದೇವೆ. ಎಲ್ಲಾ ಕಡೆ ಜಿಲ್ಲೆಗೆ ಒಂದರಂತೆ ಸ್ಕ್ರೀನಿಂಗ್ ಕಮಿಟಿ ಮಾಡಿದ್ದೇವೆ. ಆದರೆ ಬೆಂಗಳೂರಿನಲ್ಲಿ ರೂರಲ್ಲಿ ಒಂದು ಕಮಿಟಿ ಹಾಗೂ ಬೆಂಗಳೂರಿನಲ್ಲಿ ಹೆಚ್ಚು ಸಕ್ರಮ ಮಾಡುವ ವಿಚಾರ ಇರುವುದರಿಂದ ಕಾರ್ಪೋರೇಷನ್ ಏರಿಯಾಕ್ಕೆ ಒಂದು ಹಾಗೂ ಬಿಡಿಎ ಅಥಾರಿಟಿ ಏರಿಯಾಕ್ಕೆ ಒಂದು ಸ್ಕ್ರೀನಿಂಗ್ ಕಮಿಟಿ ತರಬೇಕೆಂದು ಸೂಚನೆ ತಂದಿದ್ದೇವೆ. ಮತ್ತು ಸೆಕ್ಷನ್ 8 ರಲ್ಲಿ, ಯಾರು ಸಮಯಕ್ಕೆ ಸರಿಯಾಗಿ ಅರ್ಜಿ ಹಾಕದೇ ಇದ್ದರೆ ಅವರು ಸಕ್ರಮವಾಗಿ ಕಟ್ಟಿದ್ದರೆ ಅದನ್ನು ನೆಲಸಮ ಮಾಡಿ ಬಿಡಿಸಬೇಕೆಂದು ತಂದಿದ್ದೇವೆ. ಅವರು ಏನಾದರೂ ಬೇಗ ಅರ್ಜಿ ಹಾಕಿಕೊಳ್ಳದೇ ಇದ್ದರೆ ಆ ಮನೆಗಳಿಗೆ ವಿದ್ಯುತ್, ನೀರಿನ ಸಂಪರ್ಕ ನಿಲ್ಲಿಸಿದರೆ ಬಹುಶಃ ಅವರು ಅಪ್ಲಿಕೇಷನ್ ಹಾಕಿಕೊಳ್ಳುತ್ತಾರೆ within the date ಎಂದು ಹೇಳಿ ಅದಕ್ಕೆ ತಿದ್ದುಪಡಿ ತಂದಿದ್ದೇವೆ. ಮತ್ತೆ ಬೆಂಗಳೂರಿನಲ್ಲಿ ಸುಮಾರು 2 ಲಕ್ಷಕ್ಕಿಂತ ಹೆಚ್ಚು ಮನೆಗಳನ್ನು ಅಕ್ರಮವಾಗಿ ಕಟ್ಟಿದ್ದಾರೆ. ಬೇರೆ ಬೇರೆ ಏರಿಯಾಗಳಲ್ಲಿ ಬಹಳ ಮನೆಗಳು ಸರ್ಕಾರಿ ಜಾಗ ಹಾಗೂ ರೆವಿನ್ಯೂ ಸೈಟ್ನಲ್ಲಿ ಇರುವುದರಿಂದ ಅದನ್ನು ಸಕ್ರಮ ಮಾಡಬೇಕಾಗಿದೆ. ಜೊತೆಗೆ ಈಗಾಗಲೇ ಎಲ್ಲಿ ನಾವು ರಸ್ತೆ ಮಾಡಿದ್ದೇವೆ, ಅನೇಕ ಕಡೆ ನೀರು ಕೊಟ್ಟಿದ್ದೇವೆ. ಅಲ್ಲೆಲ್ಲಾ ಹೆಚ್ಚಾಗಿ ಮುನಿಸಿಪಾಲಿಟಿಗೆ ಬರ್ಡನ್ ಆಗಿದೆ. ಇದೆಲ್ಲಾ ಮೂಡಿದ್ದು ಸರ್ಕಾರಿ ಜಾಗದಲ್ಲಿ ಕಟ್ಟಿರುವವರಿಗೆ ಸರ್ಕಾರಕ್ಕೆ ಹಣ ಬರುತ್ತದೆ ಮತ್ತು ಎಲ್ಲೆಲ್ಲಿ ಮುನಿಸಿಪಾಲಿಟಿಯವರು ಬೇರೆ ಬೇರೆ ಸೌಲಭ್ಯಗಳನ್ನು ಕೊಟ್ಟಿದ್ದಾರೋ ಅಲ್ಲಿ ಅವರಿಗೆ ಹಣ ಬರುತ್ತದೆ. ಇದರಲ್ಲಿ ನಾವು ಹೆಚ್ಚಾಗಿ ತಿದ್ದುಪಡಿಯನ್ನು ತಂದಿಲ್ಲ. ಆದ್ದರಿಂದ ದಯಮಾಡಿ ಮಾನ್ಯ ಸದಸ್ಯರು ಈ ವಿಧೇಯಕಕ್ಕೆ ಒಪ್ಪಿಗೆ ಕೊಡಬೇಕೆಂದು ನಾನು ತಮ್ಮ ಮುಖಾಂತರ ಅವರಿಗೆ ಪ್ರಾರ್ಥನೆ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಇಲ್ಲಿಗೆ ಇವತ್ತಿನ ಸಭೆ ಮುಗಿದು ಮತ್ತೆ ನಾಳೆ ಬೆಳಿಗ್ಗೆ 11 ಗಂಟೆಗೆ ಮತ್ತೆ ಸೇರುವುದು.

(ಸದನವು 6.03 ಕ್ಕೆ ಮುಕ್ತಾಯಗೊಂಡು ಮತ್ತೆ 15.2.94ನೇ ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಸೇರಲು ನಿರ್ಧರಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)